


ನನಗೆ ಅನತಿ ದೂರದಲ್ಲೇ ಒಂದು ದೃಶ್ಯ ಕಾಣಿಸಿತು. ಅದು ಊರಿನ ಹೊರಕೇರಿಯಿರಬಹುದು. ಇಂಥ ರಣಬಿಸಿಲಲ್ಲೂ ಒಂದು ಬೋಳು ಮರದಡಿಯಲ್ಲಿ ಜನ ಸೇರಿದ್ದಾರೆ. ಜನರೆಂದರೆ ನಾಲ್ಕೋ ಐದೋ ಅಲ್ಲ; ಸುಮಾರು ಐವತ್ತು, ಅರವತ್ತಕ್ಕೂ ಹೆಚ್ಚಿರಬಹುದು. ಆಸುಪಾಸಿನ ಮಕ್ಕಳು-ಮರಿ ಸೇರಿ ನೂರೂ ಆಗಬಹುದು. ಎಲ್ಲರೂ ಏನೇನೋ ಪಿಸುಗುಡುತ್ತಿದ್ದಾರೆ. ಊರಿನ ಬಿಸಿಲು, ಮನೆಯ ಸೆಕೆ ತಾಳಲಾರದೆ ತಂಪನರಸಿ ಇಲ್ಲಿ ಬಂದಿದ್ದಾರೆಂದುಕೊಂಡರೆ ಮೂರ್ಖತನವಾದೀತು. ಇಡೀ ಬದುಕನ್ನೇ ಬಿಸಿಲು-ನೆರಳಿನಾಟದಲ್ಲಿ ಕಳೆದು ಪೂರಾ ಬೋಳಾದ ಆ ಮರ ಈಗ ಅದ್ಯಾವ ಹಿತ ನೀಡೀತು? ಹಾಗಾದರೆ ಅಲ್ಲೇನಾಗಿರಬಹುದೆಂದು ಏನೆಲ್ಲಾ ಯೋಚಿಸಿದರೂ ಅಷ್ಟೇ, ಊಹೂಂ, ಅಲ್ಲಿನ ಸಂದರ್ಭಕ್ಕೂ ನನ್ನ ಊಹೆಗೂ ತಾಳೆಯಾಗಲಿಲ್ಲ. ಇನ್ನು ಸಹಿಸೆನೆಂಬಂತೆ ಕುತೂಹಲದ ಬೆನ್ನತ್ತಿ ಆ ಜಾಗಕ್ಕೇ ಹೋದೆ. ಹತ್ತಿರ ಹೋದೆ. ನಾಲ್ಕೈದು ಜನರನ್ನು ಪಕ್ಕಕ್ಕೆ ಸರಿಸಿ ಎಲ್ಲರೂ ದಿಟ್ಟಿಸುವತ್ತ ನಾನೂ ನೋಡಿದೆ. ಆಶ್ಚರ್ಯ! ಬೋಳು ಮರದ ಒಂದು ಟೊಂಗೆಗೆ ನೇಣು ಬಿಗಿದ ಸ್ಥಿತಿಯಲ್ಲಿ ಜೋಡು ಚಪ್ಪಲಿ ನೇತಾಡುತ್ತಿದ್ದವು. ಆದರೆ, ಹಗ್ಗವಿರಲಿಲ್ಲ. ಬದಲಿಗೆ ಉದ್ದದ ಕಪ್ಪು ದುಪಟ್ಟಾ. ಯಾವುದೋ ಹುಡುಗಿಯದ್ದಿದ್ದಂತೆ ಕಾಣುತ್ತದೆ. ಇನ್ನು ಆ ಚಪ್ಪಲಿಗಳಲ್ಲಿ ಚೂರು ವಿಶೇಷವಿದೆ. ಅವು ಎರಡು ಚಪ್ಪಲಿಗಳು. ಅಂದರೆ 'ಜೋಡು!'. ಆದರೆ, ಆ ಜೋಡಿನಲ್ಲೂ ಬಲವಾದ ಎಡವಟ್ಟು. ಅವೆರಡೂ ಚಪ್ಪಲಿಗಳು ಬೇರೆ ಬೇರೆ ವಾರಸುದಾರರ ಒಂದೊಂದು ಎಡ ಮತ್ತು ಬಲ ಸೇರಿ ಜೋಡಾಗಿವೆ. ನೋಡಲು ಸುಕ್ಕಾಗಿವೆ, ಅಲ್ಲಲ್ಲಿ ಮುಕ್ಕಾಗಿವೆ, ಕೊಳಕಾಗಿಯೂ ಇವೆ. ಅವುಗಳನ್ನು ನೇಣು ಬಿಗಿದ